**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**
**ಪ್ರಕರಣ ಸಂಖ್ಯೆಃ ಎಸ್.ಸಿ 6/2020**

**ದಿನಾಂಕಃ 07.11.2022**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**

**ಪ್ರಾ.ಸಾಃ 2 (ಚಾ.ಸಾ.2)**

| | | |
|---|---|---|
| **ಹೆಸರು** | **ಃ** | **ಕುಮಾರ** |
| **ತಂದೆಯ ಹೆಸರು** | **ಃ** | **ಸೇವ್ಯಾನಾಯಕ** |
| **ವಯಸ್ಸು** | **ಃ** | **45 ವರ್ಷ** |
| **ಉದ್ಯೋಗ** | **ಃ** | **ಮೆಡಿಕಲ್ ಸ್ಟೋರ್‌ನಲ್ಲಿ ಕೆಲಸ** |
| **ವಾಸ ಸ್ಥಳ** | **ಃ** | **ದೊಡ್ಡೇರಿ** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಮೋಟಾ ಸೋಮ್ಯನಾಯಕ ನನ್ನ ತಾತಾ. ಅವರಿಗೆ ದೊಡ್ಡೇರಿ ಗ್ರಾಮದಲ್ಲಿ 5 ಎಕೆರೆ ಜಮೀನು ಇತ್ತು. ಅವರಿಗೆ ಇಬ್ಬರು ಗಂಡು ಮಕ್ಕಳು ಹಾಗೂ 5 ಜನ ಹೆಣ್ಣು ಮಕ್ಕಳು. ನನ್ನ ತಂದೆ ಸೇವಾನಾಯಕ ಮತ್ತು ನನ್ನ ಚಿಕ್ಕಪ್ಪ – ರಾಮನಾಯಕ ಅವರ ಗಂಡು ಮಕ್ಕಳು ಇರುತ್ತಾರೆ. ರಾಮನಾಯಕರವರಿಗೆ 4 ಜನ ಗಂಡು ಮಕ್ಕಳು ಮತ್ತು 2 ಹೆಣ್ಣು ಮಕ್ಕಳು ಇರುತ್ತಾರೆ.

2. ಆರೋಪಿ ನನ್ನ ಚಿಕ್ಕಪ್ಪ ರಾಮನಾಯಕರವರ ಮಗ. ಚಾಸಾ.1 ಪ್ರಕಾಶ, ಚಾಸಾ.3 – ಲಕ್ಷ್ಮಣ ನನ್ನ ತಮ್ಮಂದಿರು. ನನ್ನ ತಾತ ತೀರಿಕೊಂಡ ನಂತರ ಸದರಿ ಜಮೀನನ್ನು ಅವರು ಮಕ್ಕಳಾದ ಸೇವ್ಯಾನಾಯಕ ಮತ್ತು ರಾಮನಾಯಕ ಸಾಗುವಳಿ ಮಾಡುತ್ತಿದ್ದರು.

3. ರಾಮನಾಯಕ ತೀರಿಕೊಂಡಿದ್ದಾರೆ. ಅವರು ತೀರಿಕೊಂಡ ನಂತರ ನನ್ನ ಚಿಕ್ಕಪ್ಪನ ಮಕ್ಕಳಾದ ಚಂದ್ರನಾಯಕ, ಲಕ್ಷ್ಮಣ, ಶ್ರೀನಿವಾಸ, ಕೆಂಪನಾಯಕ ಮತ್ತು ನಾವು ಸಾಗುವಳಿ ಮಾಡುತ್ತಿದ್ದೇವೆ.

4. ತಾಃ 04.08.2019 ರಂದು ಬೆಳಿಗ್ಗೆ 8 ಗಂಟೆಗೆ ನಾನು, ಲಕ್ಷ್ಮಣ, ಪ್ರಕಾಶ ಸದರಿ ಜಮೀನಿಗೆ ಹೋಗಿದ್ದೆವು. ಜಮೀನಿನಲ್ಲಿ ನಾವು ಕಳೆ ಕೀಳುತ್ತಿದ್ದಾಗ

ಹಿಂದಿನಿಂದ ಗುಂಡು ಹಾರಿಸಿದ ಶಬ್ದ ಕೇಳಿಸಿತು. ತಲೆ ಎತ್ತಿ ನೋಡಿದಾಗ ಆರೋಪಿ - ಚಂದ್ರನಾಯಕ ಅಲ್ಲಿಗೆ ಬಂದಿದ್ದ, ಅವನ ಕೈಯಲ್ಲಿ ಬಂದೂಕು ಇತ್ತು. ಅಲ್ಲಿ ಅವನ ಕಾರು ಇತ್ತು. ನಾವು ಆ ಭಯಕ್ಕೆ ಓಡುತ್ತಿದ್ದೆವು. ಆಗ ಆರೋಪಿ ಮತ್ತೆ ಗುಂಡು ಹಾರಿಸಿದ. ಸದರಿ ಗುಂಡು ನನ್ನ ಬಲ ತೊಡೆಯಿಂದ ಪಾರಾಗಿ ನನ್ನ ಎಡ ತೊಡೆಗೆ ಸವರಿಕೊಂಡು ಗುಂಡು ಹೋಯಿತು. ನನ್ನ 2 ತೊಡೆಗೆ ಗಾಯವಾಗಿ, ನಾನು ಬಿದ್ದು ಹೋದೆನು. ಆಗ ನನಗೆ ಪ್ರಜ್ಞೆ ಹೋಯಿತು. ಮುಂದೇನಾಯಿತು ಎಂದು ನನಗೆ ಗೊತ್ತಾಗಲಿಲ್ಲ.

5. ನನ್ನನ್ನು ಬೆಂಗಳೂರಿನ ಆರ್ ಆರ್ ಆಸ್ಪತ್ರೆಗೆ ದಾಖಲು ಮಾಡಿದ್ದರು. 2-3 ಗಂಟೆಯ ನಂತರ ನನಗೆ ಪ್ರಜ್ಞೆ ಬಂತು. ಅದೇ ದಿನ ಸಂಜೆ ಪೊಲೀಸರು ಆಸ್ಪತ್ರೆಗೆ ಬಂದು ನನ್ನನ್ನು ವಿಚಾರಿಸಿ ನನ್ನ ಹೇಳಿಕೆ ಪಡೆದುಕೊಂಡಿದ್ದಾರೆ.

6. ಘಟನೆಯ ದಿನ ನಾನು ಟೀ ಶರ್ಟ್, ಬನಿಯನ್ ಮತ್ತು ಅಂಡರ್‌ವೇರ್ ಧರಿಸಿದ್ದೆನು. ಸದರಿ ಬಟ್ಟೆಗಳಿಗೆ ರಕ್ತವಾಗಿತ್ತು.

**(ಸೀಲಾದ ಬಟ್ಟೆಯ ಚೀಲಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು.)**

ಅದರಲ್ಲಿದ್ದ ಟೀ ಶರ್ಟ್, ಮತ್ತು ಅಂಡರ್‌ವೇರ್ ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗ ಕ್ರಮವಾಗಿ ಎಂ.ಓ.1 ಮತ್ತು ಎಂ.ಓ.2 ಎಂದು ಗುರುತಿಸಲಾಯಿತು.

7. 2 ತಿಂಗಳ ನಂತರ ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು ಮತ್ತು ನನ್ನನ್ನು ವಿಚಾರಿಸಿ ನನ್ನ ಹೇಳಿಕೆ ಪಡೆದುಕೊಂಡಿದ್ದಾರೆ. ಆರೋಪಿಯ ಕಾರನ್ನು ತೋರಿಸಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ಕಾರಿನ ಫೋಟೋಗಳನ್ನು ಈಗ ಕ್ರಮವಾಗಿ ನಿಪಿ.2 ಮತ್ತು ನಿಪಿ.3 ಎಂದು ಗುರುತಿಸಲಾಯಿತು.

8. ಬಂದೂಕನ್ನು ನೋಡಿದರೆ ಗುರುತಿಸುತ್ತೇನೆ.

**(ಸೀಲಾದ ಬಟ್ಟೆಯ ಚೀಲವನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು.)**

ಅದರಲ್ಲಿದ್ದ ಬಂದೂಕವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗ ಎಂ.ಓ.3 ಎಂದು ಗುರುತಿಸಲಾಯಿತು.

**9.** ಸದರಿ ಬಂದೂಕನ್ನು ಪೊಲೀಸರು ಬಂದು ತೆಗೆದುಕೊಂಡು ಹೋಗಿದ್ದಾರೆ ಎಂದು ತಿಳಿಸಿದರು. ನನ್ನ ಅಂಡರ್‌ವೇರ್ ಜೇಬಿನಲ್ಲಿದ್ದ ಮೊಬೈಲ್ ಗುಂಡು ತಾಗಿ ಒಡೆದು ಹೋಯಿತು. ಸದರಿ ಮೊಬೈಲ್‌ನ್ನು ನೋಡಿದರೆ ಗುರುತಿಸುತ್ತೇನೆ.

**(ಸೀಲಾದ ಬಟ್ಟೆಯ ಚೀಲವನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು.)**

ಅದರಲ್ಲಿದ್ದ ಒಂದು ಒಡೆದು ಹೋದ ಮೊಬೈಲ್‌ನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗ ಎಂ.ಒ.4 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)**

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ</u>**

**10.** ಆರೋಪಿ ನಾನು ಕೆಳಗೆ ಬಿದ್ದರು ಮತ್ತೆ ಇನ್ನೊಂದು ಗುಂಡು ತೆಗೆದುಕೊಂಡು ಬಂದೂಕಿಗೆ ಲೋಡ್ ಮಾಡಲು ಹೋದಾಗ ನನ್ನ ತಮ್ಮಂದಿರಾದ ಪ್ರಕಾಶ ಮತ್ತು ಲಕ್ಷ್ಮಣ ಚಂದ್ರಯ್ಯನಿಗೆ ಬೇಡ ಬೇಡ ಎಂದು ಬಂದೂಕು ಕಿತ್ತುಕೊಳ್ಳಲು ಹೋದಾಗ ಆರೋಪಿ - ಚಂದ್ರಯ್ಯ ಬಂದೂಕು ಬಿಸಾಡಿ ನಿಮ್ಮನ್ನೆಲ್ಲಾ ಸಾಯಿಸದೇ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿ ಕಾರು ಬಿಟ್ಟು ಓಡಿ ಹೋದನು ಎಂದು ನನ್ನ ಪ್ರಕಾಶ ಮತ್ತು ಲಕ್ಷ್ಮಣ ಹೇಳಿದರು, ಬಿಸಾಡಿದ ರಭಸಕ್ಕೆ ಬಂದೂಕು ಮುರಿದು ಹೋಯಿತು, ಆ ಗುಂಡು ಅಲ್ಲೇ ಬಿದ್ದಿತ್ತು, ಎಂದು ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಅಂದರೆ ಸರಿ.

**11.** ನನ್ನ ಆಸ್ಪತ್ರೆ ಚಿಕಿತ್ಸೆಗಾಗಿ ಸುಮಾರು ರೂ.5 ಲಕ್ಷ ಖರ್ಚಾಗಿದೆ.

**<u>ಪಾಟೀ ಸವಾಲುಃ</u>**

**(ಆರೋಪಿ ಪರ ವಕೀಲರು ಕೆಲವೊಂದು ದಾಖಲೆಗಳನ್ನು ಸಂಬಂಧಪಟ್ಟ ಪೊಲೀಸರು ಚಾರ್ಜ್ ಶೀಟ್‌ನೊಂದಿಗೆ ಕೊಟ್ಟಿಲ್ಲವೆಂದು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿರುತ್ತಾರೆ. ಪಾಟೀ ಸವಾಲನ್ನು ಖರ್ಚು ಕೊಡುವ ನಿಬಂಧನೆಗೆ ಒಳಪಟ್ಟು ಮುಂದೂಡಲಾಯಿತು.)**

**<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ., ವಕೀಲರಿಂದಃ</u>**

**4.**

**5.**

**<u>ಮರುವಿಚಾರಣೆಃ ಇಲ್ಲ.</u>**

**<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ., ವಕೀಲರಿಂದಃ</u>**

**4.**

**5.**

**<u>ಮರುವಿಚಾರಣೆಃ ಇಲ್ಲ.</u>**

**<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**